ವಿಷಯ : (iv) ಯುವಜನ ಸೇವಾ ಇಲಾಖೆಯಲ್ಲಿ ಹರಿಜನ–ಗಿರಿಜನರಿಗೆ ನೇಮಕಾತಿಯಲ್ಲಿ ಮತ್ತು ಬಡ್ತಿಯಲ್ಲಿ ಸರ್ಕಾರದ ಸೇವಾ ನಿಯಮಗಳ ಪ್ರಕಾರ ನ್ಯಾಯ ದೊರೆಯದೇ ಇರುವ ಬಗ್ಗೆ.

ಶ್ರೀ ಕೆ. ಶಿವಮೂರ್ತಿ (ಭರಮಸಾಗರ).—ಅಧ್ಯಕ್ಷರೇ, ಯುವಜನ ಸೇವಾ ಇಲಾಖೆಯಲ್ಲಿ ಯಾರು ಹರಿಜನ ಗಿರಿಜನರು, ಅಲ್ಪ ಸಂಖ್ಯಾತರು ಕೆಲಸ ಮಾಡುತ್ತಿದ್ದಾರೋ ಅವರಿಗೆ ಭರ್ತಿ ಮಾಡುವಾಗ ಏನು ನ್ಯಾಯವಾಗಿ ರಿಜರ್ವೇಶನ್ ಸಿಗಬೇಕೋ ಅದು ಸಿಕ್ಕುತ್ತಿಲ್ಲ. ಎ.ಎನ್. ನಾಗರಾಜ್‌ರವರು ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದವರು ಅವರನ್ನು ಇಲ್ಲಿಗೆ ತಂದು ಹಾಕಿರುವುದರಿಂದ ಈ ಇಲಾಖೆಯಲ್ಲಿ ನ್ಯಾಯವಾಗಿ ಏನು ಹರಿಜನ ಗಿರಿಜನರಿಗೆ ಬಡ್ತಿ ದೊರೆಯ ಬೇಕಾಗಿತ್ತೋ ಅದು ದೊರೆಯದ ಹಾಗೆ ಆಗಿದೆ. ಇದರಲ್ಲಿ ಮಂತ್ರಿಗಳವರು ಮತ್ತು ದೊಡ್ಡ ದೊಡ್ಡ ಅಧಿಕಾರಿಗಳು ಸೇರಿದ್ದಾರೆಂದು ತಿಳಿದುಬಂದಿದೆ. ಇದರಿಂದ ಹರಿಜನ ಮತ್ತು ಗಿರಿಜನ ಹಾಗೂ ಅಲ್ಪಸಂಖ್ಯಾತರಿಗೆ ಏನು ತೊಂದರೆಯಾಗಿದೆ ಅದನ್ನು ಪತ್ತೆಹಚ್ಚಿ ಅವರಿಗೆ ಸೂಕ್ತವಾದ ನ್ಯಾಯವನ್ನು ದೊರಕಿಸಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಡಾ. ಜೀವರಾಜ್ ಆಳ್ವ (ಮಾನ್ಯ ಯುವಜನ ಸೇವಾ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದಂಥ ಶಿವಮೂರ್ತಿಯವರು, ಯುವಜನಸೇವಾ ಇಲಾಖೆಯಲ್ಲಿ ಹೊಸದಾಗಿ ಕೆಲವು ಹುದ್ದೆಗಳಿಗೆ ನೇಮಕಾತಿ ಮಾಡುವಾಗ ಸರಕಾರದ ನೀತಿ ನಿಯಮಾವಳಿಗಳಿಗೆ ವಿರುದ್ಧವಾಗಿ ನಡೆದು ಕೊಂಡು, ಪ್ರತಿಭಾನ್ವಿತರಾದ, ಅನುಭವವುಳ್ಳ ಹರಿಜನ ಗಿರಿಜನ ವರ್ಗಕ್ಕೆ ಸೇರಿದ ಅಧಿಕಾರಿಗಳಿಗೆ ಉದ್ಯೋಗ ಬಡ್ತಿ ವಿಚಾರದಲ್ಲಿ ಅನ್ಯಾಯ ಮಾಡಲಾಗಿದೆ ಎಂದು ಸರಕಾರದ ಹಾಗೂ ಈ ಸದನದ ಗಮನ ಸೆಳೆದಿದ್ದಾರೆ. ಆದರೆ ಇತ್ತೀಚೆಗೆ ಈ ಎಲ್ಲ ನೇಮಕಾತಿಗಳೂ ಕೂಡಾ ಪಬ್ಲಿಕ್ ಸರ್ವೀಸ್ ಕಮಿಷನ್ ಮೂಲಕವೇ ನಡೆಯುತ್ತಿದೆ. ಆದರೆ ಈ ಸಭೆಯಲ್ಲಿ ವಿವರಣೆ ಕೊಡುವಾಗ ಒಬ್ಬ ಅಧಿಕಾರಿ ಯಾದ ನಾಗರಾಜ್ ಅವರ ಬಗ್ಗೆ ಸರಕಾರ ಹೆಚ್ಚಿನ ಆಸ್ಥೆ ತೆಗದುಕೊಂಡು ಹರಿಜನ ವರ್ಗಕ್ಕೆ ಸೇರಿದ ಸಾವಿರಾರು ಅಧಿಕಾರಿಗಳಿಗೆ ಅನ್ಯಾಯವಾಗಿದೆ ಎಂದು ಹೇಳಿದ್ದಾರೆ. ಇದು ಬಹಳ ಚಿಕ್ಕ ಇಲಾಖೆ. ಇದರಲ್ಲಿ ಅಧಿಕಾರದಲ್ಲಿರತಕ್ಕವರು ಒಟ್ಟು 500-600 ಜನ ಇರಬಹುದು. ಸಾವಿರಕ್ಕೆ ಮುಟ್ಟಿಲ್ಲ, ಆದರೂ ಕೂಡಾ ಮಾನ್ಯ ಸದಸ್ಯರು ಯಾವ ಯಾವ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದನ್ನು ಗಮನ ದಲ್ಲಿಟ್ಟುಕೊಂಡು, ತೊಂದರೆಯಾಗಿದ್ದರೆ, ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಶಿವಮೂರ್ತಿ.— ಶ್ರೀ ಎ.ಎನ್. ನಾಗರಾಜ್ ಅವರ ಬಗ್ಗೆ ಹೇಳುತ್ತೀರಾ? ಅವರ ಕ್ವಾಲಿಫಿಕೇಷನ್ ಏನು? ಯಾವ ಹುದ್ದೆಗೆ ನೇಮಕ ಮಾಡಿದರು ಎಂದು ಹೇಳುತ್ತೀರಾ?

ಅಧ್ಯಕ್ಷರು.— ಹೇಳುತ್ತೇನೆ ಎಂದು ಹೇಳಿದರಲ್ಲ.

ವಿಷಯ : V : ಬೆಂಗಳೂರು ನಗರ ಸಭೆಯ ದಿನಗೂಲಿ ನೌಕರರನ್ನು ಖಾಯಂ ಮಾಡುವ ಬಗ್ಗೆ

ಶ್ರೀ ಜಿ. ನಾರಾಯಣ ಕುಮಾರ್.— ಮಾನ್ಯ ಅಧ್ಯಕ್ಷರೇ ಬೆಂಗಳೂರು ನಗರ ಸಭೆ ಕನ್ನಡ ನೌಕರರ ಹಿತರಕ್ಷಣಾ ಸಮಿತಿ, ದಿನಗೂಲಿ ನೌಕರರನ್ನು ಖಾಯಂ ಮಾಡಬೇಕೆಂದು ಹೇಳಿ ಸುಮಾರು 2-3 ದಿನಗಳಿಂದ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಸರಕಾರವರಾಗಲೀ, ನಗರಸಭೆಯವರಾಗಲೀ ಅಥವಾ ಅಧಿಕಾರಿಗಳಾಗಲೀ ಒಬ್ಬರಾದರೂ ಹೋಗಿ ನಿಮ್ಮ ಕಷ್ಟ ಏನು ಎಂದು ಕೇಳಲಿಲ್ಲ. ಇವತ್ತು ಸುಮಾರು ಒಂದು ವರ್ಷದ ಮೇಲೆ 15 ವರ್ಷದವರೆಗೂ ಕೂಡಾ ಮೂರುಕಾಲು ರೂಪಾಯಿಂದ ಹನ್ನೊಂದು ರೂಪಾಯಿಯಂತೆ ದಿನಕ್ಕೆ ಆರೂಕಾಲು ರೂಪಾಯಿ ದಿನಗೂಲಿಯಲ್ಲಿದ್ದಾರೆ. ಇವತ್ತು ಜೀವನ ನಡೆಸುವುದು ಕಷ್ಟ ಎನ್ನುವುದು ಪ್ರತಿಯೊಬ್ಬರಿಗೂ ಚೆನ್ನಾಗಿ ಗೊತ್ತಿದೆ. ಈ ನಾಡಿನಲ್ಲಿ ಹುಟ್ಟಿದಂಥ ಕನ್ನಡ ಜನ ಬಾಳಬೇಕು, ಬದುಕಬೇಕು ಎನ್ನುವುದು ನಮ್ಮ ಅಭಿಪ್ರಾಯ. ಸರಕಾರ ಇದರ ಬಗ್ಗೆ ಕಳಕಳಿ ತೋರಿಸುತ್ತಾ ಇಲ್ಲ. ಅವರು ಮಾನ್ಯ ಮುಖ್ಯಮಂತ್ರಿಗಳಿಗೆ ಇದರ ಬಗ್ಗೆ ಮನವಿ ಅರ್ಪಿಸಿದ್ದಾರೆ, ಮಾನ್ಯ ನಗರಾಭಿವೃದ್ಧಿ ಮಂತ್ರಿಯವರಿಗೂ ಅರ್ಪಿಸಿದ್ದಾರೆ. ಅವರು ಆಗಲಿ ನೋಡೋಣ ಮಾಡೋಣ ಎಂದು ಹೇಳುತ್ತಿದ್ದಾರೆಯೇ ಹೊರತು, ಅದಕ್ಕೆ ಸರಿಯಾದಂಥ ಕ್ರಮ ತೆಗೆದುಕೊಂಡಿಲ್ಲ. ಆದುದರಿಂದ ಇದರ ಬಗ್ಗೆ ಸರ್ಕಾರದ ನಿಲುವು ಏನು ಎನ್ನುವುದನ್ನು ತಿಳಿಸಬೇಕೆಂದು ತಮ್ಮ ಗಮನ ಸೆಳೆಯುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ಮಾನ್ಯ ನಗರಾಡಳಿತ ಸಚಿವರು).— ಮಾನ್ಯ ಅಧ್ಯಕ್ಷರೇ, ಎಲ್ಲಾ ಇಲಾಖೆಗಳಲ್ಲೂ ಇದ್ದಹಾಗೆ ನಗರಾಭಿವೃದ್ಧಿ ಇಲಾಖೆಯಲ್ಲೂ ಕೂಡಾ ದಿನಗೂಲಿ ಮೇಲೆ ಕೆಲಸ ಮಾಡುವಂಥ ಅನೇಕ ಜನ ಇದ್ದಾರೆ. ಬೆಂಗಳೂರು ನಗರಪಾಲಿಕೆಯಲ್ಲೂ ಕೂಡಾ ಸುಮಾರು 500 ಜನ ಮಾಲಿಗಳು, ಮಜ್‌ದೂರರು, ಪೌರಕಾರ್ಮಿಕರು, ಮೆಕಾನಿಕ್ಸ್, ವರ್ಕ್ಸ್ ಇನ್‌ಸ್ಪೆಕ್ಟರ್ಸ್ ಈ ರೀತಿಯಾಗಿ ಮಾನ್ಯ ಸದಸ್ಯರು ಹೇಳಿದ ಹಾಗೆ ಅನೇಕ ವರ್ಷಗಳಿಂದ ಕೆಲಸಮಾಡುತ್ತಿದ್ದಾರೆ. ಅವರನ್ನು ನಿಯಮಗಳ ಪ್ರಕಾರ ಖಾಯಂ ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ಈಗಾಗಲೇ ಸರಕಾರ ಎಲ್ಲ ಕ್ರಮ ಇಲಾಖೆಗಳ ಈ ಒಂದು ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಅದರ ಬಗ್ಗೆ ಒಂದು ಕ್ರಮ ತೆಗೆದು